**<u>ಅಸಲು ದಾವಾ 187/2012</u>** ಪಿ.ಡಬ್ಲ್ಯೂ:- **2**

ದಿನಾಂಕಃ **21-03-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ:- ವಾದಿಯ ಪರ ವಕೀಲರಿಂದ:-</u>**

ನಾನು ಈ ದಾವೆಯಲ್ಲಿ ವಾದಿ 1 (ಎ) ಆಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

ಈ ಹಿಂದೆ ನನ್ನ ತಾಯಿಯು ಸಾಕ್ಷ್ಯ ವಿಚಾರಣೆಯ ಸಂದರ್ಭದಲ್ಲಿ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ 19 ಎಂದು ಗುರುತಿಸಲಾಗಿದ್ದು, ಸದರಿ ದಾಖಲೆಗಳನ್ನು ಸಾಕ್ಷ್ಯ ನೋಡಿ ಗುರುತಿಸಿರುತ್ತಾರೆ. ವಂಶವೃಕ್ಷವನ್ನು ನಿಪಿ-1 ಎಂದು , ಗಣಕೀಕೃತ ಪಹಣಿ ಪತ್ರಿಕೆಗಳನ್ನು ನಿಪಿ-2 ರಿಂದ 11 ಎಂದು, ಮನೆ ತೆರಿಗೆ ವಿಧಿಸುವ ಪಟ್ಟಿಯ ಧೃಡೀಕೃತ ನಕಲನ್ನು ನಿಪಿ-12 ಎಂದು, ಕರ ಆಕರಣೆಯ ರಿಜಿಸ್ಟರ್ ನ ಧೃಡೀಕೃತ ನಕಲನ್ನು ನಿಪಿ-13 ಎಂದು, ಮರಣ ಪ್ರಮಾಣ ಪತ್ರನ್ನು ನಿಪಿ-14 ಎಂದು, ಕೈ ಬರಹದ ಪಹಣಿ ಪತ್ರಿಕೆಗಳನ್ನು ನಿಪಿ-15 ರಿಂದ 19 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**